
ಗಲೇ ಅವಳನ್ನು ಕುಮಾರಿ ದೇವಿಯಂತೆ ಪೂಜಿಸಿದ್ದ ಸ್ವಾಮಿ ವಿವೇಕಾನಂದರು ನುಡಿದಿದ್ದ ಮಾತು ಭವಿಷ್ಯದಲ್ಲಿ ಅದೆಷ್ಟು ಸತ್ಯವಾಗಿ ಪರಿಣಮಿಸಿತ್ತು !

ಶ್ರೀಕೃಷ್ಣ ಪ್ರೇಮ ಎಂಬ ಬ್ರಿಟಿಷ್ ಸಾಧಕ ಯಶೋದಾ ಮಾಳ ಮೊದಲನೆಯ ಶಿಷ್ಯನಾಗಿ ಮಿರ್ತೋಳಾ ಆಶ್ರಮದ ಸ್ಥಾಪನೆಗೆ ತುಂಬ ಸಹಾಯಕನಾದ. ಅವನ ಪೂರ್ವಾಶ್ರಮದ ಹೆಸರು ರೋನಾಲ್ಡ್ ನಿಕ್ಸನ್. ಅವನು ಹಿಂದೂಧರ್ಮದ ವೈಷ್ಣವ ಪಂಥದ ಯೂರೋಪಿನ ಮೊದಲ ವ್ಯಕ್ತಿ ಎನ್ನಬಹುದು.

ನಿಕ್ಸನ್ ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಮೊದಲನೆಯ ಮಹಾಯುದ್ಧದ ವೇಳೆಯಲ್ಲಿ ವಿಮಾನಚಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದ. ಒಮ್ಮೆ ವೈರಿಪಡೆ ಅವನನ್ನು ಎಲ್ಲ ಕಡೆಯಿಂದ ಆಕ್ರಮಿಸಿದಾಗ ಹೇಗೋ ಒಂದು ವಿಶೇಷವಾದ ದೈವೀಕೃಪೆಯಿಂದ ಅವನು ಸಾವಿನಿಂದ ಪಾರಾಗಿದ್ದ! ಈ ಘಟನೆಯ ನಂತರ ಆತನ ಮಾನಸಿಕ ಸ್ಥಿತಿ ಸಂಪೂರ್ಣವಾಗಿ ಬದಲಾಯಿತು. ನಾವೆಲ್ಲ ಯಾವುದೋ ಅವ್ಯಕ್ತ ಹಾಗೂ ಅಗೋಚರ ಶಕ್ತಿಯ ಕೈಯಲ್ಲಿ ಆಡುವ ಪಾತ್ರಗಳು ಮಾತ್ರ ಎಂದು ಅವನು ದೃಢವಾಗಿ ನಂಬಿದ! ಥಿಯೋಸಫಿ, ಅದ್ವೈತ ಅಭ್ಯಾಸ, ಹಿಂದೂ ಸಂಸ್ಕೃತಿ ಹಾಗೂ ಬೌದ್ಧಧರ್ಮಗಳ ಅಭ್ಯಾಸವನ್ನು ಚೆನ್ನಾಗಿ ಪೂರೈಸಿದ ನಿಕ್ಸನ್‌ಗೆ ಭಾರತಕ್ಕೆ ಬಂದು ಹೆಚ್ಚಿನ ಆಧ್ಯಾತ್ಮಿಕತೆಯನ್ನು ತಿಳಿದುಕೊಳ್ಳುವ ಬಯಕೆ ಇತ್ತು. ಅದೇ ವೇಳೆಗೆ ಲಖನೌ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಜ್ಞಾನೇಂದ್ರನಾಥ ಚಕ್ರವರ್ತಿ ನಿಕ್ಸನ್‌ಗೆ ಲಖನೌದಲ್ಲಿ ತಮಗೆ ಸಹಾಯಕನಾಗಿ ಕಾರ್ಯವೃತ್ತಿ ಕೈಗೊಳ್ಳಲು ಅವನನ್ನು ಆಮಂತ್ರಿಸಿದರು. ಅವರ ಕರೆಯನ್ನು ಸಂತೋಷದಿಂದ ಸ್ವೀಕರಿಸಿದ ನಿಕ್ಸನ್ ಭಾರತಕ್ಕೆ ಬಂದು ಜ್ಞಾನೇಂದ್ರನಾಥನಿಗೆ ತುಂಬಾ ಆಪ್ತನೂ ಆದ. ಅದೇ ಸಮಯದಲ್ಲಿ ವಿರಾಗಿಣಿಯಾಗಿ ಸಂನ್ಯಾಸಜೀವನ ನಡೆಸುತ್ತಿದ್ದ 'ಯಶೋದಾ ಮಾ' ಆಲ್ಮೋರಾ ಪ್ರದೇಶದಿಂದ ಹತ್ತು ಕಿ.ಮೀ. ದೂರದಲ್ಲಿ ಮಿರ್ತೋಳಾ ಎನ್ನುವಲ್ಲಿ ಆಶ್ರಮ ನಿರ್ಮಿಸಿಕೊಂಡು ಸಾಧನೆಗೈಯುತ್ತಿದ್ದಳು. ಅವಳ ಜ್ಞಾನ ಹಾಗೂ ವೈರಾಗ್ಯಗಳಿಂದ ಪ್ರಭಾವಿತನಾದ ನಿಕ್ಸನ್, ಅವಳ ಶಿಷ್ಯನಾಗಿ ತಾನೂ ಕೂಡ ಸಂನ್ಯಾಸ ಜೀವನ ನಡೆಸಬಹುದೆ? ಎಂದು ಕೇಳಿದ. ಅವನ ತೀವ್ರವಾದ ವೈರಾಗ್ಯ ಮತ್ತು ಶ್ರೀಕೃಷ್ಣ ಭಕ್ತಿಯನ್ನು ಕಂಡು ಸಂತೋಷಗೊಂಡ ಯಶೋದಾ ಮಾ ಅವನನ್ನು ತನ್ನ ಮೊದಲ ಶಿಷ್ಯನನ್ನಾಗಿ ಸ್ವೀಕರಿಸಿದಳು. ಅವನ ಸಂನ್ಯಾಸದ ಹೆಸರು 'ಶ್ರೀಕೃಷ್ಣಪ್ರೇಮ' ಎಂದಾಯಿತು.

೧೯೯೪ ನೇ ಇಸವಿಯಲ್ಲಿ ಯಶೋದಾ ಮಾ ತನ್ನ ಅರುವತ್ತೆರಡನೆಯ ವಯಸ್ಸಿನಲ್ಲಿ ಇಹಲೋಕಯಾತ್ರೆ ಮುಗಿಸಿದಳು. ಉತ್ತರ ಬೃಂದಾವನ ಎಂದೇ ಹೆಸರುವಾಸಿಯಾಗಿದ್ದ ಶಿವನ ದೇವಸ್ಥಾನದ ಹತ್ತಿರ ಇರುವ ಮಿರ್ತೋಳಾ ಇಂದಿಗೂ ಭಕ್ತರಿಗೆ ಯಾತ್ರಾಸ್ಥಳವಾಗಿದೆ. ಸ್ವಾಮಿ ವಿವೇಕಾನಂದರ ಭವಿಷ್ಯದ ನುಡಿಗೆ ಸಾಕ್ಷಿಯಾಗಿ ನಿಂತ ಯಶೋದ ಮಾಳ ತ್ಯಾಗ ವೈರಾಗ್ಯಗಳ ಸಂಕೇತವಾಗಿ ಇಂದಿಗೂ ಮಿರ್ತೋಳಾ ಆಶ್ರಮ ಕಂಗೊಳಿಸುತ್ತಿದೆ. *

**ಯುವಚೇತನ**



## ಪ್ರೇಮಭಾಸ್ಕರನ ಉದಯ

ಒಬ್ಬ ಯೋಗಿ ಅದ್ಭುತ ಶಕ್ತಿಯನ್ನು ಪಡೆದನು. ಅವನು ಹೇಳಿದನು, ''ನೋಡು ನನ್ನ ಶಕ್ತಿಯನ್ನು. ಮೇಲೆ ಆಕಾಶವನ್ನು ನೋಡು. ಅದನ್ನೆಲ್ಲ ಮೋಡಗಳಿಂದ ಮುಚ್ಚುತ್ತೇನೆ'' ಎಂದನು. ಆಮೇಲೆ ಮಳೆ ಬರಲು ಆರಂಭವಾಯಿತು. ''ಸ್ವಾಮಿ ನೀವು ಒಂದು ಅದ್ಭುತವನ್ನು ಮಾಡಿರುವಿರಿ. ಆದರೆ ನಾನು ಯಾವುದನ್ನು ತಿಳಿದರೆ, ಮತ್ತೆ ಯಾವುದನ್ನೂ ಕೋರುವುದಿಲ್ಲವೋ ಅದನ್ನು ಬೋಧಿಸಿ'' ಎಂದು ಯಾರೋ ಕೇಳಿಕೊಂಡರು. ಶಕ್ತಿಯನ್ನು ಬಯಸಕೂಡದು, ಏನನ್ನೂ ಬಯಸಕೂಡದು. ಇದನ್ನು ಕೇವಲ ಬುದ್ಧಿಶಕ್ತಿಯಿಂದಲೇ ಗ್ರಹಿಸುವುದಕ್ಕೆ ಆಗುವುದಿಲ್ಲ, ಸಹಸ್ರಾರು ಗ್ರಂಥಗಳನ್ನು ಓದಿದರೂ ನಿಮಗೆ ಇದು ಅರ್ಥವಾಗಲಾರದು. ನಾವು ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ಪ್ರಾರಂಭಿಸಿದರೆ ಒಂದು ಹೊಸ ಪ್ರಪಂಚ ಬೆಳಕಿಗೆ ಬರುವುದು. ಹುಡುಗಿ ತನ್ನ ಗೊಂಬೆಯೊಂದಿಗೆ ಆಟವಾಡುತ್ತಿರುವಾಗ ಆ ಗೊಂಬೆಗೆ ಯಾವಾಗಲೂ ಹೊಸ ಗಂಡನನ್ನು ಹೊಂಚುತ್ತಿರುವಳು. ಆದರೆ ಅವಳಿಗೆ ತನ್ನ ನಿಜವಾದ ಗಂಡ ಸಿಕ್ಕಿದರೆ, ಗೊಂಬೆಗಳನ್ನೆಲ್ಲ ಒಂದೇ ಸಲ ಮೂಲೆಗೆ ಎಸೆಯುವಳು. ಇದರಂತೆಯೇ ನಮ್ಮ ಆಟವೂ ಕೂಡ. ಪ್ರೇಮಭಾಸ್ಕರನು ಉದಯಿಸಿದಾಗ ಆಟದ ಸೂರ್ಯರು, ಎಂದರೆ ನಮ್ಮ ಇತರ ಬಯಕೆಗಳೆಲ್ಲ ಒಂದೇ ಸಲ ಮಾಯವಾಗುವುವು. ನಾವು ಶಕ್ತಿಯಿಂದ ಏನು ಮಾಡಬಲ್ಲೆವು? ನಮ್ಮಲ್ಲಿರುವ ಶಕ್ತಿ ಹೊರಟುಹೋದರೆ ದೇವರಿಗೆ ಧನ್ಯವಾದವನ್ನು ಅರ್ಪಿಸಿ. ಪ್ರೀತಿಸುವುದಕ್ಕೆ ಪ್ರಾರಂಭಿಸಿ. ನನಗೂ ದೇವರಿಗೂ ಮಧ್ಯದಲ್ಲಿ ಪ್ರೇಮ ವಿನಃ ಮತ್ತಾವುದೂ ಇರಕೂಡದು. ದೇವರು ಪ್ರೇಮಪಾತ್ರನು, ಅವನು ಮತ್ತೇನೂ ಅಲ್ಲ. ಪ್ರಾರಂಭದಲ್ಲಿ ಪ್ರೀತಿ, ಮಧ್ಯದಲ್ಲಿ ಪ್ರೀತಿ, ಕೊನೆಯಲ್ಲಿ ಪ್ರೀತಿ ಇರಬೇಕು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೬, ಪು. ೧೨೩)*

# ಸ್ವಾಮಿ ಧರ್ಮೇಶಾನಂದ (೧೮೯೯-೧೯೯೪)


ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೨**

### ಶ್ರೀ 'ಮ' – ಅವರ ಸ್ಮೃತಿ, ಸ್ವಾಮಿ ಧರ್ಮೇಶಾನಂದರಿಂದ (ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)

ಶ್ರೀ 'ಮ' ನನ್ನ ಪರಮ ಹಿತೈಷಿಯೂ, ಶುಭಾಕಾಂಕ್ಷಿಯೂ ಆಗಿದ್ದರು. ಒಂದು ದಿನ ಒಬ್ಬರೊಂದಿಗೆ ವಿವಾದವುಂಟಾಯಿತು. ಮಧ್ಯಾಹ್ನ ಭೋಜನದ ಬಳಿಕ ಸಾಂತ್ವನವನ್ನಪೇಕ್ಷಿಸಿ ಶ್ರೀ 'ಮ' ರ ಬಳಿಗೆ ಹೋದೆ. ನನ್ನನ್ನು ಕಂಡೊಡನೆಯೆ ಅವರು ಪ್ರೀತಿಯಿಂದ 'ಬಾ, ಬಾ' ಎಂದು ಕರೆಯುತ್ತ ಬೆಂಚಿನ ಮೇಲೆ ಕುಳಿತುಕೊಳ್ಳಲು ಹೇಳಿದರು. ಬಳಿಕ ನನ್ನ ಕೈಗೆ ಕೆಲವು ಕರಪತ್ರಗಳನ್ನು ಕೊಟ್ಟು, ''ನೋಡಿಲ್ಲಿ, ದೇವಾಸುರ ಸಂಗ್ರಾಮ ನಡೆಯುತ್ತಿದೆ. ಒಂದು ಪಕ್ಷದವರು ಮತ್ತೊಂದು ಪಕ್ಷವನ್ನು ದೂಷಿಸುತ್ತಿದ್ದಾರೆ. ಮಠದ ವಿರೋಧಿಗಳು ಹೇಳುತ್ತಾರೆ, 'ಬೇಲೂರು ಮಠದ ಮೇಲೆ ಹುಲಿ ಎರಗಿದೆ; ಬೇಲೂರು ಮಠಕ್ಕೆ ಹುಲಿ ಬಂದಿದೆ' '' ಎನ್ನುತ್ತ ಶ್ರೀ 'ಮ' ಗಟ್ಟಿಯಾಗಿ ನಗತೊಡಗಿದರು. ಅವರ ನಗುವನ್ನು ಕಂಡು ನಾನೂ ನಗತೊಡಗಿದೆ. ನನ್ನ ಮನಸ್ಸಿನ ವೇದನೆಯನ್ನು ಅವರಿಗೆ ಹೇಳಲಾಗಲಿಲ್ಲ. ಅವರು ಠಾಕೂರರ ಆತ್ಮೀಯ ಪಾರ್ಷದರಾಗಿದ್ದುದರಿಂದ ಅವರ ಮುಗ್ಧ ನಗು ನನ್ನ ದುಃಖವನ್ನು ದೂರ ಮಾಡಿತ್ತು.

ಮತ್ತೊಂದು ದಿನ ನಾನವರಿಗೆ ಹೇಳಿದೆ, ''ಠಾಕೂರರು ಭಗವಂತನೆಂಬ ವಿಶ್ವಾಸ ನನಗೆ ಉಂಟಾಗುತ್ತಿಲ್ಲ.'' ಅವರೆಂದರು, ''ಇದೇನು ಹೇಳುತ್ತಿರುವೆ! ಇಷ್ಟೆಲ್ಲ ಓದಿ, ಠಾಕೂರರ ಪಾರ್ಷದರ ಸಂಗಲಾಭವನ್ನು ಪಡೆದ ಮೇಲೂ, ಠಾಕೂರರು ಭಗವಂತನೆಂಬ ವಿಶ್ವಾಸ ಬರಲಿಲ್ಲವೆ? ರಾಮಾಯಣದ ಏಳು ಕಾಂಡಗಳನ್ನೋದಿ ಈಗ 'ಸೀತೆ ಯಾರು?' ಎನ್ನುತ್ತಿರುವೆಯಲ್ಲ! ಹೋಗಲಿ ಬಿಡು. ಒಮ್ಮೊಮ್ಮೆ ಮನಸ್ಸಿಗೆ ಹೀಗೆಲ್ಲ ತೋರುತ್ತದೆ. ನನಗೂ ಹೀಗೇ ಆಗಿತ್ತು. ಒಂದು ವಿಷಯ ನೆನಪಾಗುತ್ತಿದೆ. ೧೮೮೨ ಅಥವ ೧೮೮೩ರ ಒಂದು ಮಧ್ಯಾಹ್ನ ಊಟವಾದ ಬಳಿಕ ಠಾಕೂರರು ಹಾಸಿಗೆಯಲ್ಲಿ ಮಲಗಿದ್ದಾರೆ. ನಾನು ಕಾಲುಚಾಪೆಯ ಮೇಲೆ ಕುಳಿತು ಅವರ ಕಾಲಿನ ಮೇಲೆ ಕೈಯಾಡಿಸುತ್ತ, 'ಇವರು ಸಾಮಾನ್ಯರಂತೆಯೆ ತಿನ್ನುತ್ತಾರೆ, ಓಡಾಡುತ್ತಾರೆ, ಮಲಗುತ್ತಾರೆ; ಸಾಧಾರಣ ಜನರಂತೆಯೆ ವ್ಯವಹರಿಸುತ್ತಾರೆ. ಇವರು ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಕರ್ತರು ಹೇಗ ತಾನೇ ಸಾಧ್ಯ ? ಇವರಾದರೋ ದೇಹಧಾರಿ ವ್ಯಕ್ತಿ' ಎಂದೆಲ್ಲ ಭಾವಿಸುತ್ತಿದ್ದೇನೆ. ಆಗ ಇದ್ದಕ್ಕಿದ್ದಂತೆ ಠಾಕೂರರು ಎದ್ದು ಕುಳಿತು, 'ಮಾಸ್ಟರ್, ಏನು ಭಾವಿಸುತ್ತಿರುವೆ?' ಎನ್ನುತ್ತ ತಮ್ಮ ಹೃದಯದೆಡೆ ಕೈತೋರುತ್ತ ಹೇಳಿದರು, 'ಎಲ್ಲವೂ ಇಲ್ಲಿಯಯೇ ಇದೆ. ಇದರ ಬಗ್ಗೆ ಚಿಂತನೆ ಮಾಡಿದರೆ ನೀನು ಎಲ್ಲವನ್ನೂ ಪಡೆಯುವೆ' –ಎಂದು ಮೂರು ಬಾರಿ ಹೇಳಿ ಸಮಾಧಿಸ್ಥರಾದರು.''



''ಬಹಳ ಹೊತ್ತು ಸಮಾಧಿಯಲ್ಲಿದ್ದು ಬಳಿಕ ಆ ಉನ್ನತ ಸ್ಥಿತಿಯಿಂದ ಕೆಳಗಿಳಿದು ಜಗನ್ಮಾತೆಯೊಂದಿಗೆ ಮಾತನಾಡತೊಡಗಿದರು – 'ಅಮ್ಮ, ನನಗೇನೂ ತಿಳಿಯದು. ನೀನು ಹೇಳಿಸಿದಂತೆ ಹೇಳಿದೆ, ನಾನೊಬ್ಬ ಬಾಲಕನಷ್ಟೆ. ಅಮ್ಮ, ನನ್ನಿಂದ ತಪ್ಪಾಗಿದೆಯೆ? ನೀನೇ ನನ್ನ ಬಾಯಿಂದ ಈ ಮಾತುಗಳನ್ನಾಡಿಸಿದೆ.' ನೋಡು, ಇದರಿಂದಲೆ ಠಾಕೂರರು ಭಗವಂತನೆಂದು ನಾನು ತಿಳಿದುಕೊಂಡೆ. ಜಗನ್ಮಾತೆ ಹಾಗೂ ಠಾಕೂರರು ಬೇರೆಯಲ್ಲ.''

ಶ್ರೀ 'ಮ' – ಅವರು ಸತ್ಯವನ್ನು ಎಂದೂ ಬಿಟ್ಟವರಲ್ಲವೆಂಬುದನ್ನು ಲಕ್ಷಿಸಿರುವೆ. ಅವರೆಂದೂ ಕೋಪಗೊಳ್ಳುತ್ತಿರಲಿಲ್ಲ. ಆದರೂ ಕೊಟ್ಟ ಮಾತಿಗೆ ತಪ್ಪಿದರೆ ಕುಪಿತರಾಗುತ್ತಿದ್ದರು. ಒಂದು ದಿನ ಭಕ್ತರೊಬ್ಬರ ಜತೆ ಎಲ್ಲಿಗೋ ಹೋಗುವುದಿತ್ತು. ಆದರೆ ಆ ಭಕ್ತರು ಹೇಳಿ ಕಳುಹಿಸಲೂ ಇಲ್ಲ, ಬರಲೂ ಇಲ್ಲ. ಆಗ ಶ್ರೀ ಮ ಕ್ರುದ್ಧರಾಗಿ ಹೇಳಿದರು, ''ಸತ್ಯವನ್ನು ಪಾಲಿಸದಿದ್ದರೆ ಏನೂ ಸಾಧಿಸಲಾಗದು. ಠಾಕೂರರು ಸತ್ಯಸ್ವರೂಪರಾಗಿದ್ದರು.'' ಅವರ ಈ ನುಡಿಗಳು ನನಗೆ ಚೆನ್ನಾಗಿ ನೆನಪಿದೆ.

ಶ್ರೀ 'ಮ' ತಮ್ಮ ಜೀವನದುದ್ದಕ್ಕೂ ಅನೇಕ ಕಷ್ಟಗಳನ್ನು ಎದುರಿಸಿದ್ದರು. ಸ್ವಾವಲಂಬಿಗಳಾಗಿದ್ದ ಅವರು ತಮ್ಮ ಅಡಿಗೆಯನ್ನು ಸ್ವತಃ ಕುಕ್ಕರಿನಲ್ಲಿ ತಯಾರಿಸಿಕೊಳ್ಳುತ್ತಿದ್ದರು. ಅದರಲ್ಲಿ ಅನ್ನ ಮತ್ತು ತರಕಾರಿಗಳನ್ನು ಬೇಯಿಸಿಕೊಳ್ಳುತ್ತಿದ್ದರು. ಹಾಲು ಕುಡಿಯುತ್ತಿದ್ದರು. ''ಹಾಲು ಕುಡಿದರೆ ಮೇಧಾಶಕ್ತಿ ಹೆಚ್ಚುತ್ತದೆ'' ಎನ್ನುತ್ತಿದ್ದರು. ರಾತ್ರಿ ಕೆಲಸದವನಿಂದ ಬ್ರೆಡ್ ತರಿಸಿಕೊಳ್ಳುತ್ತಿದ್ದರು. ಅದನ್ನು ಸ್ವಲ್ಪ ಪಲ್ಯದೊಂದಿಗೆ ತಿಂದು, ಹಾಲು ಕುಡಿಯುತ್ತಿದ್ದರು. ಭಕ್ತರು ಸಂದೇಶ, ರಸಗುಲ್ಲಾ ಮುಂತಾದ ಸಿಹಿ ಪದಾರ್ಥಗಳನ್ನು ತರುತ್ತಿದ್ದರು. ನಾನು ಅವರಲ್ಲಿಗೆ ಹೋದಾಗ ನನಗೂ ಕೊಂಚ ತಿಂಡಿ ಕೊಡುತ್ತಿದ್ದರು. ನನಗೊಂದು ದಿನ ಅವರು ಸಂದೇಶವನ್ನು ತಿನ್ನಲು ಕೊಟ್ಟಾಗ ನಾನೆಂದೆ, ''ನನಗೆ ಹಸಿವಿಲ್ಲ.'' ಅವರು ನಗುತ್ತ ಹೇಳಿದರು, ''ನೋಡು, ಅರುಚಿಯಾದಾಗ ರುಚಿಗೆಂದು ಸಂದೇಶವನ್ನು ಸೃಷ್ಟಿಸಿರುವರು; ನಿನಗೆ ಈ ಸಂದೇಶದ ಮೇಲೆಯೆ ಅರುಚಿ! ಸರಿ. ಇರಲಿ ಬಿಡು, ನೀನು ತಿನ್ನಬೇಕಾಗಿಲ್ಲ.''

ಶ್ರೀ 'ಮ' ಎಷ್ಟೊಂದು ಪ್ರೀತಿಯಿಂದ ನನಗೆ ತಿಂಡಿ ತಿನ್ನಿಸುತ್ತಾರೆ, ಆದರೆ ನಾನು ಅವರಿಗೆ ತಿನ್ನಲು ಏನನ್ನೂ ಕೊಡುವುದಿಲ್ಲ, ಎಂದು ನನಗನ್ನಿಸುತ್ತಿತ್ತು. ಅಂತರ್ಯಾಮಿಯಂತೆ ಅವರಿಗೆ ನನ್ನ ಮನಸ್ಸಿನಲ್ಲೇನಿದೆಯೆಂದು ತಿಳಿಯಿತು. ಸಂಜೆ ಭಕ್ತರೆಲ್ಲ ಹೊರಟು ಹೋದ ಮೇಲೆ ನನಗೆಂದರು, ''ನೋಡು, ನನಗೆ ಹುಷಾರಿಲ್ಲ. ಬೆಳಗ್ಗೆ ಅಡಿಗೆ ಮಾಡಿ ಊಟ ಮಾಡಿದ್ದೇನೆ. ರಾತ್ರಿ ಏನು ಮಾಡಲಿ ಹೇಳು?'' ನಾನೆಂದೆ, ''ನನಗೆ ಟೈಫಾಯಿಡ್ ಆಗಿದ್ದಾಗ ನಾನು ಮಿಲ್ಕ್ ರೋಲ್ ಬ್ರೆಡ್ ಅನ್ನು ಹಾಲಿನಲ್ಲಿ ಅದ್ದಿ ತಿನ್ನುತ್ತಿದ್ದೆ. ಬಲು ಬೇಗನೆ ಅದು ಜೀರ್ಣವಾಗುತ್ತಿತ್ತು.'' ''ನನಗೆ ಯಾರು ತಾನೆ ತಂದುಕೊಡುವರು?'' ನಾನು ಚಹಾ ಅಂಗಡಿಯಿಂದ ಒಂದು ಮಿಲ್ಕ್ ರೋಲ್ ಬ್ರೆಡ್ ತಂದೆ. ಒಳ್ಳೆಯ ಅಂಗಡಿ ಸಿಗಲಿಲ್ಲ. ಅವರು ಆ ಬ್ರೆಡ್ ಮೇಲೆ ಸ್ವಲ್ಪ ಗಂಗಾಜಲವನ್ನು ಚಿಮುಕಿಸಿ ಹಾಲಿನೊಂದಿಗೆ ಅದನ್ನು ತಿಂದರು.

ಅದಾದ ಮರುದಿನ ನಾನು ಮರ್ಟನ್ ಇನ್‌ಸ್ಟಿಟ್ಯೂಶನ್ ತಲುಪಿದಾಗ ಶ್ರೀ 'ಮ' ನೆಲಮಾಳಿಗೆಯಲ್ಲಿ ಗೃಹಸ್ಥರೊಬ್ಬರೊಂದಿಗೆ ಮಾತನಾಡುತ್ತಿದ್ದರು. ನನ್ನನ್ನು ಕಂಡಾಗ ಅವರು ನನಗೆ ಬೆಂಚಿನ ಮೇಲೆ ಕುಳಿತುಕೊಳ್ಳುವಂತೆ ಹೇಳಿದರು. ಭಕ್ತರೊಡನೆ ಮಾತು ಮುಗಿಸಿ ಅವರು ನನ್ನನ್ನು ನಾಲ್ಕನೆ ಮಹಡಿಯಲ್ಲಿದ್ದ ಅವರ ಕೊಠಡಿಗೆ ಕರೆದೊಯ್ದರು. ಮೆಟ್ಟಿಲು ಹತ್ತುವಾಗ ಅವರು ನನ್ನ ಕಿಸೆಯಲ್ಲಿ ಬ್ರೆಡ್ಡನ್ನು ನೋಡಿದ್ದರು. ನಾನದನ್ನು ಅವರಿಗೆ ಕೊಟ್ಟೆ. ಮೇಲ್ಚಾವಣಿಯ ಕೋಣೆಯಲ್ಲಿ ಭಕ್ತರೆಲ್ಲ ಅವರನ್ನು ಕಾಯುತ್ತಿದ್ದರು. ಅಂದು ಅವರು ನಾನಾ ಆಧ್ಯಾತ್ಮಿಕ ಘಟನೆಗಳನ್ನು ಹೇಳಿದರು. ನಂತರ ರಾತ್ರಿ ಒಂಬತ್ತು ಗಂಟೆಯ ಹೊತ್ತಿಗೆ ಎಲ್ಲರೂ ಹೊರಟುಹೋದಾಗ ನನಗೆ ಸ್ವಲ್ಪ ಇರ ಹೇಳಿದರು. ಅಂದು ಯಾರೋ ತಂದು ಕೊಟ್ಟಿದ್ದ ತಟ್ಟೆ ತುಂಬ ಜಗದ್ಧಾತ್ರೀ ದೇವಿಯ ವಿವಿಧ ಪ್ರಸಾದಗಳನ್ನು ನನಗೆ ತಿನ್ನಿಸಿದರು. ಆನಂತರ ನಾನವರಿಗೆ ತಂದುಕೊಟ್ಟಿದ್ದ ಬ್ರೆಡ್ಡನ್ನು ಗಂಗಾಜಲದಿಂದ ಶುದ್ಧೀಕರಿಸಿ, ಹಾಲಿನೊಂದಿಗೆ ಅದನ್ನು ತಿನ್ನುತ್ತ, ''ಬ್ರೆಡ್ ತುಂಬ ಚೆನ್ನಾಗಿದೆ'' ಎಂದರು. ಹೀಗೆ ನಾನು ಶ್ರೀ 'ಮ' ಅವರ ಪ್ರೀತಿಯನ್ನು ಸಂಪಾದಿಸಿರುವೆ.

ಸಾಧುಗಳು ಸದಾ ಭಗವಂತನನ್ನೇ ಅವಲಂಬಿಸಬೇಕಲ್ಲದೆ ಗೃಹಸ್ಥರನ್ನಲ್ಲ, ಎಂದು ಶ್ರೀ 'ಮ' ಹೇಳುತ್ತಿದ್ದರು. ನಾನು ಬಾಗ್ ಬಜಾರಿನ 'ಉದ್ಬೋಧನ'ದಿಂದ ಮೂರು ನಾಲ್ಕು ಮೈಲು ನಡೆದು ಶ್ರೀ 'ಮ' ಅವರ ಬಳಿಗೆ ಹೋಗುತ್ತಿದ್ದೆ. ಭಕ್ತರು ಟ್ರಾಮ್‌ನಲ್ಲಿ ಹೋಗಲು ಒಂದಾಣೆ. ಸುಖಲಾಲ್ ಬಾಬು ಎಂಬ ಒಬ್ಬ ಭಕ್ತರು ಟ್ರಾಮ್‌ನಲ್ಲಿ ಹೋಗಲು ಒಂದಾಣೆ ಕೊಡುತ್ತಿದ್ದರು. ಒಂದು ದಿನ ನಾನು ಹಿಂದಿರುಗಲು ಹೊರಟು ನಿಂತೆ. ಆದರೆ ಶ್ರೀ 'ಮ' ಸುಖಲಾಲ್ ಬಾಬುವನ್ನು ತಡೆದರು. ನಾನಾಗ ನಡೆದೇ ಹಿಂದಿರುಗಿದೆ.

ಒಮ್ಮೆ ಸ್ವಾಮಿ ವಿವೇಕಾನಂದರು ಮುಂಬೈಯಿಂದ ಒಬ್ಬ ಶ್ರೀಮಂತ ಸೇಠರನ್ನು ಶ್ರೀ 'ಮ' ಅವರ ಬಳಿ ಕರೆದುಕೊಂಡು ಹೋಗಿದ್ದರು. ಅವರು ಅವರಿಗೆ ಭಗವಂತನ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದರು. ನಂತರ ಅವರು ಹೊರಟು ಹೋದಾಗ ಶ್ರೀ 'ಮ' ವಿಶ್ವಾನಂದ ಮಹಾರಾಜರನ್ನು ಕರೆದು ಹೇಳಿದರು: ''ನೋಡಿ, ಸಾಧುಗಳನ್ನು ಗೃಹಸ್ಥರು ಹಿಂಬಾಲಿಸಬೇಕಲ್ಲದೆ ಶ್ರೀಮಂತ ಭಕ್ತರನ್ನು ಸಾಧುಗಳು ಹಿಂಬಾಲಿಸುವುದು ಒಳ್ಳೆಯದಲ್ಲ. ನಿನ್ನ ಮೇಲೆ ಅವರಿಗೆ ಶ್ರದ್ಧೆಯಿಲ್ಲದಿದ್ದರೆ, ನಿನ್ನ ಮಾತಿನಲ್ಲೂ ಅವರಿಗೆ ಶ್ರದ್ಧೆಯಿರುವುದಿಲ್ಲ. ಭಗವಂತನ ಮೇಲೆ ನಿರ್ಭರರಾಗಿರಬೇಕೆ ಹೊರತು ಧನಿಕರ ಮೇಲಲ್ಲ!''

ಒಂದು ಬೆಳಗ್ಗೆ ೧೧ ಗಂಟೆಯ ಹೊತ್ತಿಗೆ ಶ್ರೀ 'ಮ' ಅವರ ಬಳಿಗೆ ಹೋಗಿದ್ದೆ. ಅವರು ತೆರೆದ ಬಾತ್‌ರೂಮಿನಲ್ಲಿ ಕುಳಿತು ಬಕೆಟ್ಟಿನ ನೀರಿನಲ್ಲಿ ಸ್ನಾನ ಮಾಡುತ್ತಿದ್ದರು. ಭಾರವಾದ ಬಕೆಟ್ಟನ್ನು ಎತ್ತಲು ಅವರಿಗೆ ಕಷ್ಟವಾಗುತ್ತಿತ್ತು. ಒಂದು ಬಿಂದಿಗೆಯಿಂದ ನೀರನ್ನು ತೆಗೆದು ಸ್ನಾನ ಮಾಡುತ್ತಿದ್ದರು. ನಾನೆಂದೆ, ''ಇಷ್ಟು ಕಷ್ಟಪಟ್ಟು ಏಕೆ ಸ್ನಾನ ಮಾಡುತ್ತೀರಿ?'' ಅವರೆಂದರು, ''ಮತ್ತೇನು ಮಾಡಲಿ? ಇಲ್ಲಿ ನನ್ನನ್ನು ಯಾರೂ ನೋಡುವುದಿಲ್ಲ.'' ನಾನೆಂದೆ, ''ನೀವು ಬೇಲೂರು ಮಠಕ್ಕೆ ಹೋಗಿ ಅಲ್ಲಿದ್ದರೆ ಎಲ್ಲರೂ ನಿಮ್ಮನ್ನು ಬಹಳ ಕಾಳಜಿಯಿಂದ ನೋಡಿಕೊಳ್ಳುವರು.'' ಅವರು ಕೋಪಿಸಿಕೊಂಡು ಹೇಳಿದರು, ''ಏನೆಂದೆ? ನಾನು ಸಾಧುಗಳ ಸೇವೆಯನ್ನು ಸ್ವೀಕರಿಸಲೆ? ಸಾಧುಗಳು ಬಹಳ ದೊಡ್ಡವರು.

**ಮೇರುಸರ್ಷಪಯೋರ್ಯದ್ ಯತ್**
**ಸೂರ್ಯಖದ್ಯೋತಯೋರಿವ ।**
**ಸರಿತ್ಸಾಗರಯೋರ್ಯದ್ ಯತ್**
**ತಥಾ ಭಿಕ್ಷುಗೃಹಸ್ಥಯೋಃ ॥**